**ಪ್ರ ದ ನ್ಯಾ ದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ**

**ಸಿ ಸಿ ನಂಃ 525/20**

ಪ್ರಾಸಾ3

ಚಾಸಾ 3

ಸಾಕ್ಷಿಯ ಹೆಸರುಃ ದಿವ್ಯಾ
ತಂದೆ /ಗಂಡನ ಹೆಸರು ಃ ದೇವರಾಜ
ವಯಸ್ಸು ಃ **37**
ಉದ್ಯೋಗ ಃ ಗೃಹಿಣಿ
ವಾಸ ಸ್ಥಳ ಃ ಕುಶಾಲನಗರ.

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 07.11.2024**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನನಗೆ ಆರೋಪಿ ಪರಿಚಯ ಇರುವುದಿಲ್ಲ. ಈ ಕೇಸಿನ ಬಗ್ಗೆ ನನಗೇನು ಗೊತ್ತಿರುವುದಿಲ್ಲ. ಪೋಲಿಸರ ಮುಂದೆ ನಾನು ಯಾವುದೆ ಹೇಳಿಕೆಯನ್ನು ನೀಡಿರುವುದಿಲ್ಲ.

ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿಪಿ **5** ಎಂದು ಗುರುತಿಸಲಾಯಿತು.

(ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದರಿಂದ ಮಾನ್ಯ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಕೋರಿರುತ್ತಾರೆ. ವಾದ ವಿವಾದ ಆಲಿಸಿದ್ದೇನೆ. ದಾಖಲೆಗಳನ್ನು ಪರಿಶೀಲಿಸಿದೆ. ಅನುಮತಿಸಿದೆ.)

ಪಾಟಿ ಸವಾಲುಃ ಮಾನ್ಯ ಎಪಿಪಿ ಯವರಿಂದ

ದಿಃ **25.01.2020** ರಂದು ನಾನು ಮನೆಯಲ್ಲಿ ಇರುವಾಗ ಬೆಳಗ್ಗೆ ಸುಮಾರು **11.00** ಗಂಟೆ ನಮ್ಮ ಪಕ್ಕದ ನಿವಾಸಿ ಯಾದ ಆರೋಪಿಯ ಮನೆಯಲ್ಲಿ ಕಿರುಚಾಡಿದ ಶಬ್ದ ಕೇಳಿ ನಾನು ಮತ್ತು ಚಾಸಾ **2** ರವರು ಹೋಗಿ ನೋಡಿಲಾಗಿ ಚಾಸಾ **1** ರವರು ಆರೋಪಿಯ ಮನೆಯಲ್ಲಿದ್ದು ಆರೋೀಪಿ ಚಾಸಾ **1** ರವರನ್ನು

ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಂತರ ನಾವುಗಳು ಸಮಾಧಾನ ಪಡಿಸಿ ಚಾಸಾ 1 ರವರನ್ನು ಅವರ ಅಕ್ಕ ಚಾಸಾ 5 ರವರ ಮನೆಗೆ ಕಳುಹಿಸಿ ಕೊಟ್ಟೆವು ಎಂದರೆ ಸರಿಯಲ್ಲ. ನಂತರ ಈ ಬಗ್ಗೆ ಚಾಸಾ 5 ರವರು ಪೋಲಿಸ ಠಾಣೆಯಲ್ಲಿ ದೂರು ದಾಖಲಸಿರುವ ವಿಚಾರ ತಿಳಿದಿರುತ್ತದೆ ಎಂದರೆ ಸರಿಯಲ್ಲ. ಈಗ ಓದಿ ಕೇಳಿಸಿಕೊಂಡ ನಿಪಿ-**5** ರಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯೊಂದಿಗೆ ರಾಜಿಯಾಗಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/-

ಪ್ರ ದ ನ್ಯಾ ದಂ, ಕುಶಾಲನಗರ.